ಮಾತುಕತೆಯಲ್ಲಿ ಹದಿಹರೆಯದ ಲೋಹಿಯಾ ಬದುಕಿನ ಆದರ್ಶ, ಗುರಿಗಳೆಲ್ಲ ಸ್ಪಷ್ಟ ಆಕಾರ ಪಡೆಯತೊಡಗಿದವು. ಆಗ ಜವಾಹರಲಾಲ್ ನೆಹರು ಲೋಹಿಯಾಗೆ ಆದರ್ಶವಾಗಿದ್ದರು; ಶುಕ್ಲಾಗೆ ವಿವೇಕಾನಂದ ಆದರ್ಶವಾಗಿದ್ದರು. ಗೆಳೆಯರು ಮಧ್ಯಾಹ್ನದ ಹೊತ್ತಿಗೆ ಸಾರನಾಥ ತಲುಪಿದರು.

ಸಾರನಾಥದ ಸ್ತೂಪಗಳು, ಗೋಡೆಗಳ ಮೇಲಿದ್ದ ಚಿತ್ರಗಳು, ವಿನ್ಯಾಸಗಳು ಇವನ್ನೆಲ್ಲ ಆಸಕ್ತಿಯಿಂದ ನೋಡನೋಡುತ್ತಾ ಲೋಹಿಯಾ ಗತಕಾಲದ ಪಿಸುಮಾತುಗಳನ್ನು ಆಲಿಸಲೆತ್ನಿಸುತ್ತಿದ್ದರು. ಸಾರನಾಥದ ವಸ್ತು ಸಂಗ್ರಹಾಲಯದಲ್ಲಿದ್ದ ಮೂರ್ತಿಗಳನ್ನು, ಅಲ್ಲಿದ್ದ ವಸ್ತುಗಳನ್ನು ನೋಡುತ್ತಾ ಕುತೂಹಲದಿಂದ ಅವುಗಳ ಇತಿಹಾಸ ತಿಳಿಯಲೆತ್ನಿಸುತ್ತಿದ್ದರು; ತಾವು ತಿಳಿದುಕೊಂಡಿದ್ದನ್ನು ಉಳಿದವರಿಗೂ ಬಿಡಿಸಿ ಹೇಳುತ್ತಿದ್ದರು.

ಭಾರತದ ಸಂಸ್ಕೃತಿಯನ್ನು, ಇತಿಹಾಸವನ್ನು ಎಲ್ಲಿಂದ ಅರಿಯಬೇಕೆಂಬುದು ಲೋಹಿಯಾಗೆ ಹದಿಹರೆಯದಲ್ಲೇ ಸ್ಪಷ್ಟವಾಗತೊಡಗಿತು. ಲೋಹಿಯಾ ತಮ್ಮ ಜೀವನದುದ್ದಕ್ಕೂ ಪುಸ್ತಕಗಳು, ಸಂವಾದ, ಚರ್ಚೆ, ಚಿಂತನೆ, ಕ್ರಿಯೆಗಳಿಂದ ಹಲವು ಅಂಶಗಳನ್ನು ಕಲಿತಂತೆ, ಪ್ರವಾಸದಲ್ಲಿ ಕಂಡ ಸ್ಥಳಗಳು, ಇತಿಹಾಸದ ಕಟ್ಟಡಗಳು, ಶಿಲ್ಪಗಳಿಂದಲೂ ಕಲಿಯುತ್ತಿದ್ದರು; ಮುಂದೆ ಈ ಕುರಿತು ಪ್ರಬುದ್ಧ ಲೇಖನಗಳನ್ನು ಬರೆದರು.

ಇಂಥ ಹತ್ತಾರು ಪ್ರವಾಸಗಳಲ್ಲಿ ಕಂಡ ಇತಿಹಾಸವನ್ನು ಕುರಿತು ಮುಂದೊಮ್ಮೆ ಲೋಹಿಯಾ ಬರೆದ ಮಾತು: 'ಇಂಡಿಯಾದ ಜನ ತಮ್ಮ ಧರ್ಮ ಮತ್ತು ಇತಿಹಾಸಗಳನ್ನು ಕಲ್ಲಲ್ಲಿ ಕೆತ್ತಿಟ್ಟಿದ್ದಾರೆ. ಇತಿಹಾಸವನ್ನು ಅವರು ತೀರಾ ಕ್ಷಣಿಕವೆಂದು ಭಾವಿಸಿದ ಕಾರಣ ಅದಕ್ಕೆ ಎಂದೂ ಮನ್ನಣೆ ಕೊಡಲಿಲ್ಲ; ಅದಕ್ಕಾಗಿಯೇ ಅವರು ಇತಿಹಾಸಕ್ಕೆ ಪ್ರತಿಯಾಗಿ ಕಥಾಕಾಲ್ಪನಿಕಗಳನ್ನು ಆಶ್ರಯಿಸಿದರು. ಇತಿಹಾಸವಾದರೂ ತನ್ನ ಜೀವಸಾರವನ್ನು ಚಿರಬಾಳುವಂಥ ಕಲ್ಲಿನ ಮೇಲೆ ಕೊರೆಸಿಕೊಂಡು ಮುಯ್ಯಿ ತೀರಿಸಿಕೊಂಡಿದೆ. ಭಾರತೀಯರ ಧಾರ್ಮಿಕ ಚಿಂತನೆ ಹೆಚ್ಚು ಹೆಚ್ಚು ಶೂನ್ಯಸ್ಥಿರವಾದ ಹಾಗೆಲ್ಲ ಇನ್ನೊಂದು ಕಡೆಯಿಂದ ಅದು ಕಲ್ಲಿನ ವಸ್ತುಭಾರದಲ್ಲಿ ಹರಳುಗಟ್ಟಿಕೊಳ್ಳಲು ಯತ್ನಿಸಿತು. ಜಗತ್ತಿನ ಮತ್ತಾವುದೇ ಜನಾಂಗ ಕೂಡ ತನ್ನ ಇತಿಹಾಸದ ಸತ್ವವನ್ನಾಗಲೀ ಅಥವಾ ತನ್ನ ಚೈತನ್ಯದ ಇತಿಹಾಸವನ್ನಾಗಲೀ ಇಷ್ಟರಮಟ್ಟಿಗೆ, ಇಷ್ಟು ಸೊಗಸಾಗಿ, ಇಷ್ಟು ಸುಂದರವಾಗಿ, ಕಲ್ಲಿನಲ್ಲಿ ಮೂರ್ತಗೊಳಿಸಿದ್ದಿಲ್ಲ.'

ಲೋಹಿಯಾ ಮುಂದೊಮ್ಮೆ ಶುಕ್ಲಾ ಹಾಗೂ ಮತ್ತೊಬ್ಬ ಮಿತ್ರನ ಜೊತೆ ಅಲಹಾಬಾದ್ ಕೋಟೆ ನೋಡಲು ಹೋದರು. ಕೋಟೆಯ ಹೆಬ್ಬಾಗಿಲಲ್ಲಿ ಬ್ರಿಟಿಷ್ ಕಾವಲುಗಾರನೊಬ್ಬ ನಿಂತಿದ್ದ. ಲೋಹಿಯಾ ಅಲ್ಲಿದ್ದ ಅಶೋಕಸ್ತಂಭ ಕುರಿತು ಅವನನ್ನು ವಿಚಾರಿಸಿದರು. ಅವನು ಇಂಗ್ಲಿಷಿನಲ್ಲಿ ವಿವರಿಸತೊಡಗಿದ. ಅವನ ವಿವರಣೆ ಲೋಹಿಯಾಗೆ ಅರ್ಥವಾದರೂ, ಅವರ ಜೊತೆಯಲ್ಲಿದ್ದ ಮಿತ್ರರಿಗೆ ಏನೇನೂ ಅರ್ಥವಾಗಲಿಲ್ಲ. ಈ ಬಗ್ಗೆ ಯೋಚಿಸಿದ ಲೋಹಿಯಾ ಹೇಳಿದರು: 'ಇಷ್ಟು ವರ್ಷ ಇಂಗ್ಲಿಷ್ ಓದಿದ ಮೇಲೂ ಇಂಗ್ಲಿಷ್ ಬರುವುದಿಲ್ಲ ಎಂದರೆ, ಇದು ಎಂದೆಂದಿಗೂ ಪರಭಾಷೆಯಾಗಿ ಇರುತ್ತದೆಯೇ ಹೊರತು, ನಮ್ಮ ಭಾಷೆ ಆಗುವುದಿಲ್ಲ.'

ಅಷ್ಟೊತ್ತಿಗಾಗಲೇ ಮಕ್ಕಳು ಹಿಂದಿ ಹಾಗೂ ಇನ್ನಿತರ ಭಾರತೀಯ ಭಾಷೆಗಳಲ್ಲಿ ವಿಷಯಗಳನ್ನು ಕಲಿಯದಿದ್ದರೆ ಭಾರತೀಯರ ಮಾನಸಿಕ ಗುಲಾಮಗಿರಿ ತೊಲಗುವುದಿಲ್ಲ ಹಾಗೂ ಅವರಲ್ಲಿ ಸ್ವತಂತ್ರ ಚಿಂತನೆ ಬೆಳೆಯುವುದಿಲ್ಲ ಎಂಬುದು ಲೋಹಿಯಾಗೆ ಖಾತ್ರಿಯಾಗಿತ್ತು. ಇಂಗ್ಲಿಷ್ ಆಡಳಿತ ಭಾಷೆಯಾಗಿ ಭಾರತೀಯ ಭಾಷೆಗಳ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆಯ ವಿರುದ್ಧ ಅವರು ಜೀವಮಾನವಿಡೀ ಮಾಡಿದ ಹೋರಾಟದ ತಳಹದಿ ಈ ಘಟ್ಟದಿಂದಲೇ ಶುರುವಾಯಿತು.

ಗೌಹಾತಿಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗಿಯಾಗಿದ್ದ ಲೋಹಿಯಾ ವಿದ್ಯಾಸಾಗರ್ ಕಾಲೇಜಿನಲ್ಲಿ ಸ್ವಾತಂತ್ರ್ಯ ಚಳುವಳಿಯ ಭಾಗವಾದ ವಿದ್ಯಾರ್ಥಿ ರಾಜಕಾರಣದಲ್ಲಿ ಕ್ರಿಯಾಶೀಲರಾದರು. ಓದು, ಚಳುವಳಿ, ರಾಜಕಾರಣ ಎಲ್ಲದರಲ್ಲೂ ಸಮಾನ ಆಸಕ್ತಿ ತೋರುತ್ತಿದ್ದರು. ನಡೆ ನುಡಿಗಳ ನಿಷ್ಠುರತೆ, ಆಳದ ಸತ್ಯವನ್ನು ನೇರವಾಗಿ ಹೇಳುವ ಸಹಜ ಶೈಲಿ ಅವರ ವ್ಯಕ್ತಿತ್ವದ ಭಾಗವಾಗತೊಡಗಿದವು. ಈ ಗುಣಗಳು ಅವರ ಕ್ಲಾಸ್‌ರೂಂ ಚರ್ಚೆಗಳಲ್ಲೂ ಕಾಣುತ್ತಿದ್ದವು.

ಕಾಲೇಜಿನಲ್ಲಿ ಲೋಹಿಯಾಗೆ ಪ್ರಿಯವಾದ ವಿಷಯಗಳಲ್ಲಿ ಇಂಗ್ಲಿಷ್ ಸಾಹಿತ್ಯ ಕೂಡ ಒಂದು. ಇಂಗ್ಲಿಷ್ ಪ್ರೊಫೆಸರ್ ಜೆ.ಎಲ್. ಬ್ಯಾನರ್ಜಿಯವರ ಜೊತೆ ಲೋಹಿಯಾರ ಪ್ರಶ್ನೋತ್ತರ, ತೀಕ್ಷ್ಣ ಚರ್ಚೆಗಳು ನಡೆಯುತ್ತಲೇ ಇದ್ದವು.

ಒಮ್ಮೆ ಕ್ಲಾಸಿಗೆ ತಡವಾಗಿ ಬಂದ ಲೋಹಿಯಾ ಬಾಗಿಲಲ್ಲಿ ನಿಂತು, 'ಮೇ ಐ ಕಮಿನ್ ಸರ್?' ಎಂದರು.

'ಯಾಕಪ್ಪಾ ತಡವಾಗಿ ಬಂದೆ?' ಎಂದರು ಬ್ಯಾನರ್ಜಿ.

'ಸರ್, ನಾನು ನಿಮ್ಮ ಮಾದರಿಯನ್ನೇ ಅನುಸರಿಸಿ ಲೇಟಾಗಿ ಬಂದೆ!' ಎಂದರು ಲೋಹಿಯಾ.

ಒಮ್ಮೆ ಕ್ಲಾಸಿನಲ್ಲಿ ಪ್ರೊಫೆಸರ್ ಬ್ಯಾನರ್ಜಿ ನೆಹರು ಬಗ್ಗೆ ಏನೇನೋ ಮಾತಾಡತೊಡಗಿದರು; ಲೋಹಿಯಾಗೂ, ಬ್ಯಾನರ್ಜಿಯವರಿಗೂ ಜಗಳವೇ ಆಯಿತು. ಕೊನೆಗೆ ಲೋಹಿಯಾ ಜೋರಾಗಿಯೇ ಕೇಳಿಬಿಟ್ಟರು: 'ನಿಮಗೆ ನೆಹರು ಬಗ್ಗೆ ಏನು ಗೊತ್ತಿದೆ, ಹೇಳಿ ನೋಡೋಣ.'

ಮಾರವಾಡಿ ಹಾಸ್ಟೆಲ್‌ನಲ್ಲಿದ್ದ ಲೋಹಿಯಾ ಗೆಳೆಯರ ಜೊತೆ ಮಾತಾಡುತ್ತಾ, ಅಲ್ಲಿ ಇಲ್ಲಿ ಅಡ್ಡಾಡುತ್ತಾ ಎಷ್ಟೋ ಸಲ ರಾತ್ರಿ ನಿಗದಿಯಾದ ಸಮಯ ಮೀರಿ ಹಾಸ್ಟೆಲ್ಲಿಗೆ ಬರುತ್ತಿದ್ದರು. ಇದನ್ನು ಕಂಡು ಸಿಟ್ಟಾದ ಹಾಸ್ಟೆಲ್ ವಾರ್ಡನ್ ಶರ್ಮಾ 'ಲೋಹಿಯಾಗೆ ನಾಲ್ಕಾಣೆ ದಂಡ ವಿಧಿಸಲಾಗಿದೆ' ಎಂದು ಬರೆದು ನೋಟೀಸ್ ಬೋರ್ಡಿನಲ್ಲಿ ಅಂಟಿಸಿದರು. ಅದನ್ನು ಕಂಡು ಸಿಟ್ಟಾದ ಲೋಹಿಯಾ ನೋಟೀಸ್ ಹರಿದು ಹಾಕಿದರು! ಇಂಥ ಬಂಡುಕೋರನಾಗಿದ್ದ ಲೋಹಿಯಾ ರಾತ್ರಿ ಬಹಳ ಹೊತ್ತಿನವರೆಗೂ ಓದಿನಲ್ಲಿ ಮುಳುಗುತ್ತಿದ್ದರು. ತಮಗೆ ಪ್ರಿಯವಾದ ರಾಜಕೀಯ ವಿಜ್ಞಾನ, ಅರ್ಥಶಾಸ್ತ್ರ, ಇಂಗ್ಲಿಷ್ ಗದ್ಯ–ಪದ್ಯ ಇವೆಲ್ಲವನ್ನೂ ಸರೊತ್ತಿನ ತನಕ ಓದುತ್ತಲೇ ಇರುತ್ತಿದ್ದರು. ರಾತ್ರಿ ತಡವಾಗಿ ಮಲಗಿ, ಬೆಳಗ್ಗೆ ತಡವಾಗಿ ಏಳುವ ಅವರ ಅಭ್ಯಾಸ ಅಲ್ಲಿಂದ ಶುರುವಾಯಿತು.

ತಡವಾಗಿ ಏಳುತ್ತಿದ್ದ ಲೋಹಿಯಾಗೆ ಹಾಸ್ಟೆಲ್ ನಿಯಮಗಳ ಪ್ರಕಾರ ಬೆಳಗ್ಗೆ ವ್ಯಾಯಾಮಕ್ಕೆ ಹೋಗುವುದು ಅಂದರೆ ಆಗುತ್ತಿರಲಿಲ್ಲ. 'ಈ ವ್ಯಾಯಾಮ–ಗೀಯಾಮ ಅನಾಗರಿಕರ ಅಭ್ಯಾಸಗಳು' ಎಂದು ರೇಗುತ್ತಿದ್ದ ಲೋಹಿಯಾ, 'ವ್ಯಾಯಾಮ ಮಾಡುವುದನ್ನು ಕಡ್ಡಾಯ ಮಾಡಿದರೆ ಹಾಸ್ಟೆಲ್ಲನ್ನೇ ಬಿಟ್ಟು ಹೊರಡುತ್ತೇನೆ' ಎಂದು ಸವಾಲು ಹಾಕಿದರು! ವ್ಯಾಯಾಮದ ಶಿಕ್ಷೆಯನ್ನು ಒಲ್ಲದ ಲೋಹಿಯಾ, ಗೆಳೆಯರ ಜೊತೆಗೆ ಸುತ್ತುವುದು, ಮೈಲಿಗಟ್ಟಲೆ ನಡೆಯುವುದು, ಈಜುವುದು, ದೋಣಿ ನಡೆಸುವುದು ಇವೆಲ್ಲವನ್ನೂ ಬಹುವಾಗಿ ಇಷ್ಟಪಡುತ್ತಿದ್ದರು. ತಮ್ಮ ಮೇಲೆ ಹೇರಿದ ನಿಯಮಗಳನ್ನು ಧಿಕ್ಕರಿಸುವ ಸ್ವಭಾವ ಲೋಹಿಯಾಗೆ ಹರೆಯದಲ್ಲೇ ಮೈಗೂಡಿತ್ತು. ಅದು ಅವರ ಜೀವಮಾನದುದ್ದಕ್ಕೂ ಮುಂದುವರಿಯಿತು. ಗೆಳೆಯರ ಜೊತೆಗಿನ ಚರ್ಚೆಗಳಲ್ಲಿ ನೇರವಾಗಿ ಮಾತಾಡುತ್ತಿದ್ದ ಲೋಹಿಯಾರ ಹರೆಯದ ವ್ಯಕ್ತಿತ್ವದಲ್ಲಿ ಮಾರ್ದವ ಗುಣವೂ ಇತ್ತು. ಹೀಗಾಗಿ ಅವರಿಗೆ ಎಲ್ಲ ವಯಸ್ಸಿನ ಗೆಳೆಯರೂ ಇದ್ದರು. ಕಾಲೇಜಿನ ಇಂಗ್ಲಿಷ್, ಹಿಂದಿ ಚರ್ಚಾಸ್ಪರ್ಧೆಗಳಲ್ಲಿ ಸದಾ ಮುಂದಿರುತ್ತಿದ್ದ ಲೋಹಿಯಾ ಹೆಸರು ಕಂಡ ತಕ್ಷಣ ಕೆಲವು ಚರ್ಚಾಪಟುಗಳು ಸ್ಪರ್ಧಾ ಕಣದಿಂದಲೇ ನಿರ್ಗಮಿಸುತ್ತಿದ್ದರು.

ಅಷ್ಟು ಹೊತ್ತಿಗಾಗಲೇ ಅಪ್ಪ ಹೀರಾಲಾಲ್ ಪೂರ್ಣ ಪ್ರಮಾಣದ ಸ್ವಾತಂತ್ರ್ಯ ಚಳುವಳಿಗೆ ಇಳಿದಿದ್ದರು. ಅಪ್ಪ ಹೀರಾಲಾಲ್ ಯಾವಾಗಾದರೊಮ್ಮೆ ಕಲಕತ್ತಾಕ್ಕೆ ಬಂದು ಮಗನನ್ನು ಕಂಡು ಮಾತಾಡಿ ವಾಪಸ್ ಚಳುವಳಿಗೆ ಹೊರಡುತ್ತಿದ್ದರು. ಬೆಳೆಯುತ್ತಿದ್ದ ಮಗನ ಜೀವನದಲ್ಲಿ, ಜೀವನಶೈಲಿಯಲ್ಲಿ ಯಾವ ಹಸ್ತಕ್ಷೇಪವನ್ನೂ ಮಾಡದ ಹೀರಾಲಾಲ್, ಮಗ ಸ್ವತಂತ್ರವಾಗಿ ಬೆಳೆಯಲು ಬಿಟ್ಟಿದ್ದರು. ಹೀರಾಲಾಲ್ ಎಲ್ಲೇ ಇದ್ದರೂ ಮಗನ ಖರ್ಚಿಗೆ ಬೇಕಾದಷ್ಟು ಮಾತ್ರ ಸಂಪಾದನೆ ಮಾಡಿ, ಪ್ರತಿ ತಿಂಗಳೂ ಐವತ್ತು ರೂಪಾಯಿ ಕಳಿಸಿ, ಉಳಿದಂತೆ ತಾವು ಚಳುವಳಿಯ ಕೆಲಸದಲ್ಲಿ ತೊಡಗಿಬಿಡುತ್ತಿದ್ದರು.

ಇತ್ತ ತಿಂಗಳ ಐವತ್ತು ರೂಪಾಯಿ ಬಂದ ತಕ್ಷಣ ಲೋಹಿಯಾ ಮಿತ್ರರನ್ನೆಲ್ಲ ಕರೆದುಕೊಂಡು ಹೋಗಿ ತಿಂಡಿ ಕೊಡಿಸುವರು; ಸಿನಿಮಾ ನೋಡುವರು; ಉಳಿದ ದುಡ್ಡಿನಲ್ಲಿ ತಮಗೆ ಬೇಕಾದ ಪುಸ್ತಕಗಳನ್ನು ಕೊಳ್ಳುವರು. 'ದ ಎಗೋಯಿಸ್ಟ್' ಕಾದಂಬರಿಯಿಂದ ಪ್ರಖ್ಯಾತನಾದ ವಿಕ್ಟೋರಿಯನ್ ಯುಗದ ಇಂಗ್ಲಿಷ್ ಕಾದಂಬರಿಕಾರ ಜಾರ್ಜ್ ಮೆರಿಡಿತ್ ಕಾದಂಬರಿಗಳು ಲೋಹಿಯಾಗೆ ಪ್ರಿಯವಾಗಿದ್ದವು.

ಕಾದಂಬರಿಗಳ ಜೊತೆಗೆ ಜನಪ್ರಿಯ ಸಿನಿಮಾ ಲೋಕವೂ ಅವರನ್ನು ಸೆಳೆಯುತ್ತಿತ್ತು.

(ಸಶೇಷ)